ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 11.11.2024.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನಾನು ಶಾಲೆ ಕಲಿತಿರುವುದಿಲ್ಲಾ. ನನಗೆ ಈಗ 44 ವರ್ಷ ವಯಸ್ಸು ಆಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆ ಗೊತ್ತಿಲ್ಲಾ ನನಗೆ ಕಾಯ್ದೆ ಬಗ್ಗೆ ಜ್ಞಾನ ಇರುವುದಿಲ್ಲಾ. ಈ ದಾವೆಗೆ ಯಾರು ಅವಶ್ಯಕ ಪಕ್ಷಗಾರರು ಮತ್ತು ಯಾರು ಅನವಶ್ಯಕ ಪಕ್ಷಗಾರರು ಅಂತಾ ನನಗೆ ಗೊತ್ತಿರುತ್ತದೆ. ಸುಂದ್ರಮ್ಮನ ಗಂಡ ನಾಗೇಂದ್ರಪ್ಪ ನನ್ನು ನಾನು ನೋಡಿರುತ್ತೇನೆ. ನಾಗೇಂದ್ರಪ್ಪನಿಗೆ 1 ನೇ ವಾದಿ ಹೆಂಡತಿ ಮತ್ತು 2 ರಿಂದ 6 ನೇ ವಾದಿಯರು ಮಕ್ಕಳು ಎಂದರೆ ಸರಿ. 7 ನೇ ವಾದಿ ನಾಗೇಂದ್ರಪ್ಪನ ಸೊಸೆ ಎಂದರೆ ಸರಿ. ವರ್ದಮಾನನ ಹೆಂಡತಿ ಲಲಿತವ್ವ ಎಂದರೆ ಸರಿ. ಲಲಿತವ್ವ ಇವಳು ಶಿಗ್ಗಾಂವ ತಲೂಕಿನ ತಡಸ ಗ್ರಾಮದಲ್ಲಿ ಇರುತ್ತಾಳೆ ಎಂದರೆ ಸರಿ. ಸುಂದ್ರಮ್ಮ 2012 ನೇ ಇಸ್ವಿಯಲ್ಲಿ ಗಂಡನ ಮೇಲೆ ಮತ್ತು ಮಕ್ಕಳ ಮೇಲೆ ದಾವೆ ಸಲ್ಲಿಸಿ ಡಿಕ್ರಿ ಪಡೆದಿದ್ದಾಳೆ ಎಂದರೆ ಸರಿಯಲ್ಲಾ. 1998 ನೇ ಸಾಲಿನಲ್ಲಿ ವರ್ದಮಾನ ಓಡಿ ಹೋಗಿದ್ದಾನೆ ಅಂದರೆ ಸಾಕ್ಷಿಯು 1999 ರಲ್ಲಿ ಹೋಗಿದ್ದಾನೆ ಎಂದು ನುಡಿಯುತ್ತಾರೆ. ವರ್ದಮಾನ 2002 ರಲ್ಲಿ ಓಡಿ ಹೋಗಿದ್ದಾನೆ ಅಂತಾ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಆದರೆ ಅದಕ್ಕಿಂತ ಮೊದಲು ಹೋಗಿದ್ದಾನೆ ಅಂತಾ ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಡಿಕ್ರಿ ಮಾಡಿಕೊಂಡಿದ್ದಾರೆ ಮತ್ತು 1/5 ಅಂತಾ ಹಿಸ್ಸೆ ಅಂತಾ ಹೇಳಿ ಬರೆಸಿರುತ್ತೇನೆ. ಸದರಿ ಡಿಕ್ರಿಯನ್ನು ಓದಿ ತಿಳಿದುಕೊಂಡಿರುತ್ತೇನೆ ಸದರಿ ಡಿಕ್ರಿಯಲ್ಲಿ

ವಾದಿಯರಿಗೆ 1/8 ಅಂಶ ಪಾಲು ಆಗಿದೆ ಎಂದರೆ ಸರಿಯಲ್ಲಾ. ಎಫ ಡಿ ಪಿ ನಂಬರ 06/2013 ಅಂತಾ 1 ನೇ ವಾದಿ ದಾಖಲಿಸಿದ್ದಳು ಎಂದರೆ ಸರಿ. ಸದರಿ ಎಫ ಡಿ ಪಿ ಯಲ್ಲಿ ಅಳತೆ ಸರಿ ಇಲ್ಲಾ ಅಂತಾ ಕಮೀಷನ ವರದಿ ಸಲ್ಲಿಸಿದ ಮೇಲೆ ಹಿಂದಕ್ಕೆ ಪಡೆದಿದ್ದಾಳೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮದು ಹಾಗೇ ಇದೆ ಎಂದು ನುಡಿಯುತ್ತಾರೆ. ವರ್ದಮಾನ ಬಹಳ ದಿನಗಳಿಂದ ಹೋಗಿದ್ದರಿಂದ ಆತನು ಸತ್ತಿದ್ದಾನೆ ಅಂತಾ ತಿಳಿದು 1 ನೇ ವಾದಿ 2012 ರ ದಾವೆಯಲ್ಲಿ ಪಾಟೀ ಮಾಡಿಲ್ಲಾ ಅಂದರೆ ಸರಿ. ವರ್ದಮಾನ ಓಡಿ ಹೋಗಿದ್ದರಿಂದ ಆತನ ವಾರಸುದಾರಳು ಅಂತಾ 1 ನೇ ವಾದಿ ಅಸಲು ದಾವಾ ನಂಬರ 03/2012 ರಲ್ಲಿ ಪಾಲು ಪಡೆದಿದ್ದಾಳೆ ಎಂದರೆ ಸರಿ. ಸದರಿ ದಾವೆಯಲ್ಲಿ ಲಲಿತಮ್ಮ ಚಳಗೇರಿ ವಕೀಲರನ್ನು ನೇಮಿಸಿ ಪ್ರಕರಣ ನಡೆಸಿದ್ದಾಳೆ ಅಂದರೆ ಸರಿಯಲ್ಲಾ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ ಈ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ವಾದಿಯರು ಕಾನೂನು ಬದ್ದವಾಗಿ ಹಿಸ್ಸೆ ಮಾಡಿಕೊಂಡು ದಾವಾ ಆಸ್ತಿಯಲ್ಲಿ ಕಾನೂನು ಬದ್ದ ಕಬ್ಜಾ ಇದ್ದಾರೆ ಎಂದರೆ ಸರಿಯಲ್ಲಾ. ದಾವಾ ಆಸ್ತಿ ನಾಗೇಂದ್ರಪ್ಪನಿಂದ ಬಂದ ಆಸ್ತಿ ಎಂದರೆ ಸಾಕ್ಷಿಯು ಅವರಪ್ಪ ಕೊಟ್ಟ ಆಸ್ತಿ ಎಂದು ನುಡಿಯುತ್ತಾರೆ. ನಾಗೇಂದ್ರಪ್ಪನಿಗೆ ಆತನ ಅಪ್ಪನಿಂದ ಬಂದ ಆಸ್ತಿ ಇರುತ್ತದೆ. ನಾನು ದಾವಾ ಆಸ್ತಿಯಲ್ಲಿ ಯಾವುದೇ ಕಬ್ಜಾದಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾಗೇಂದ್ರಪ್ಪ ಯಾವ ವರ್ಷದಲ್ಲಿ ಮರಣ ಹೊಂದಿದ್ದಾನೆ ಅಂತಾ ನನಗೆ ಗೊತ್ತಿಲ್ಲಾ. ವರ್ದಮಾನ ಈತನಿಗೆ ಆಸ್ತಿ ಯಾವ ವರ್ಷದಲ್ಲಿ ಬಂದಿದೆ ಅಂತಾ ಗೊತ್ತಿಲ್ಲಾ. ವರ್ದಮಾನ ವಾದಿಯರಿಗೆ ಗೊತ್ತಿಲ್ಲದೆ ಎಲ್ಲ ಆಸ್ತಿಗಳನ್ನು

ತನ್ನ ಒಬ್ಬನೇ ಹೆಸರಿಗೆ ಹಚ್ಚಿಕೊಂಡಿದ್ದಾ ಎಂದರೆ ಸರಿಯಲ್ಲಾ. ವಾದಿಯವರ ಮನೆತನದ ಹಿರಿತನ 1 ನೇ ವಾದಿ ಮಾಡುತ್ತಾ ಬಂದಿದ್ದಾಳೆ ಅಂದರೆ ಸರಿಯಲ್ಲಾ. ಸುಂದ್ರಮ್ಮ ಮತ್ತು ಆತನ ಮನೆತನಕ್ಕೆ ಯಾವುದೇ ಅಡಚಣೆ ಇರಲಿಲ್ಲಾ ಅಂದರೆ ಸರಿಯಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿಸಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.